# ನೀವು ಕೇಳಿದಿರಿ?

ಎಸ್. ಶರತ್, ಬೆಂಗಳೂರು

ಅಜ್ಜ–ಅಜ್ಜಿ; ತಂದೆ–ತಾಯಿ; ಗಂಡ–ಹೆಂಡತಿ; ಎಲ್ಲೆಡೆಯೂ ಮೊದಲೇ ಗಂಡು. ಏಕೆ?



ಕೃತಯುಗದಿಂದಲೂ ಗಂಡು ಹೆಣ್ಣಿನ ಹಿಂದು ಹಿಂದೇ ಇರುವುದು ಪದ್ಧತಿ.

ಪಿ.ಎಸ್. ಶ್ರೀವತ್ಸ, ಬೆಂಗಳೂರು

ಸಕ್ಕರೆ ಹಾಗೂ ಉಪ್ಪು; ಇವೆರಡರಲ್ಲಿ ಹೆಚ್ಚು ಅಪಾಯಕಾರಿ ಯಾವುದು?

ಉಪ್ಪೇ. ಅದರ ಋಣ ತೀರಿಸಲು ಜನ್ಮಗಳನ್ನು ಎತ್ತಬೇಕು.

ಪಿ.ಜೆ. ರಾಘವೇಂದ್ರ, ಮೈಸೂರು

ಅರ್ಧಾಂಗಿಯನ್ನು ಸದಾ ಜೊತೆಯಲ್ಲೇ ಇರಿಸಿಕೊಂಡರೆ ಹನಿಟ್ರ್ಯಾಪ್‌ನಿಂದ ಬಚಾವಾಗಬಹುದೆ?

ಆಕೆಯನ್ನು ಮನಿಟ್ರ್ಯಾಪಿಗೆ ಕೆಡವಿ ನಂತರ ಹನಿಟ್ರ್ಯಾಪಿಸುವ ಸಾಧ್ಯತೆಯಿದೆ.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು

ಹೆಂಡತಿಯ 'ನಾನು ಬದಲಾಗಿದೀನಾ?' ಪ್ರಶ್ನೆಗೆ ನಿಮ್ಮ ಚಾಣಾಕ್ಷ ಉತ್ತರ?



ಓಹ್ ನೀನೇನಾ! 'ಯಾರೀ ಬ್ಯೂಟಿ?' ಅನ್ಕೊಂಡೆ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

ಸ್ವರ್ಗಾಧಿಪತಿ ಇಂದ್ರನ ಪತ್ನಿ ಶಚಿದೇವಿಗೆ ಸ್ವರ್ಗ ಸುಖವಿತ್ತೆ ಸಾರ್?

ಊಹೂಂ. ಸ್ವರ್ಗಕ್ಕೆ ಇಂದ್ರ ಮಾತ್ರ ಬರುತ್ತಿದ್ದ. ಸತಿ ದೇವಲೋಕದ ಕ್ವಾರ್ಟರ್ಸ್‌ನಲ್ಲೇ.

ರಾಜಶೇಖರ ಹಾದಿಮನಿ, ನವಿಲೂರು

ರಸ್ತೆಬದಿಗೆ ಅಡ್ಡಲಾಗಿ ಕಾರು ನಿಲ್ಲಿಸಿ ಹೋಗಲು ಅಡ್ಡಿ ಮಾಡುವವರಿಗೆ ನೀವಾದರೂ ಬುದ್ಧಿ ಹೇಳಿ?

ಅವರಿಗೆ ಪಂಚರ (Puncture) ಕೈಲೇ ಬುದ್ಧಿ ಹೇಳಿಸಬೇಕು.

ಅನಸೂಯ ಟಿ., ಕೇದಿಗೆಮನೆ

ಈಗಿನ ಕಾಲದಲ್ಲಿ ದೆವ್ವ, ಪಿಶಾಚಿಗಳ ಕಾಟ ಕಡಿಮೆಯಾಗಲು ಕಾರಣ?

ಅವುಗಳ ಪೈಕಿ ಕೆಲವು ಈಗ ಸೀರಿಯಲ್ ನಿರ್ಮಾಪಕ/ನಿರ್ದೇಶಕ ಆಗಿಬಿಟ್ಟಿವೆಯಂತೆ.

ಮಲ್ಲಿಕಾರ್ಜುನ, ಸುರಧೇನುಪುರ

ಪ್ರತಿಯೊಂದಕ್ಕೂ ಕೊನೆ ಇರುತ್ತದೆ. ಧಾರಾವಾಹಿಗೆ?

ಟಿಆರ್‌ಪಿ ಎಂಬ ಆಕ್ಸಿಜನ್ ಸಪ್ಲೈ ನಿಂತಾಕ್ಷಣ ಧಾರಾವಾಹಿ ಗೊಟಕ್.

ಜಗದೀಶ ಬಿ. ಹೊಸೂರು, ಮೈಸೂರು

ಹಕ್ಕಿಜ್ವರದ ಕಾರಣಕ್ಕೆ ಕೋರ್ಟ್ ಆದೇಶವಿಲ್ಲದೆಯೂ ಕೋಳಿಗೆ ದಯಾಮರಣ ನೀಡುವುದು ಸರಿಯೆ?

ಹ್ಞ! ಕಾರಣವಿಲ್ಲದೆ ಪರಿಸರವನ್ನೇ ಕೊಲ್ಲುವ ನಮಗೆ ಕೋಳಿ ಯಾವ ಲೆಕ್ಕ!

ಶಿವಮೊಗ್ಗ ರಮೇಶ್, ಮೈಸೂರು

ತಲೆ ತಗ್ಗಿಸುವುದಕ್ಕೂ, ತಲೆ ಬಾಗುವುದಕ್ಕೂ ಏನು ವ್ಯತ್ಯಾಸ?

ವಾದದ ವಿಧವೆ; ಅಪವಾದಕ್ಕೆ ತಲೆ ತಗ್ಗಿಸುತ್ತೇವೆ; ಆಶೀರ್ವಾದಕ್ಕೆ ತಲೆ ಬಾಗುತ್ತೇವೆ.

ಭಾರತೀ ಗಂಗಾಧರ್, ಬೆಂಗಳೂರು

ಕಾವಿಯನ್ನು ತೊಟ್ಟರೂ ಕಾಮವ ಬಿಡಲಿಲ್ಲ ಎಂದು ದಾಸರು ಹೇಳಿದರಲ್ಲ, ನಿಜವೆ?

ನಿಜ. ಕಾಮಕ್ಕೆ ಫುಲ್ ಸ್ಟಾಪ್ ಹಾಕುವುದು ಕಾವಿರುವವನಿಗೆ ಕಷ್ಟವೇ.

ಅ. ಮೃತ್ಯುಂಜಯ, ಪಾಂಡವಪುರ

ನಾನು ಎಂಬುದನ್ನು ಬಿಡಲು ಏನು ಮಾಡಬೇಕು?

'ಕುಲ್ಚಾ, ಪರೋಟ, ರೋಟಿ ಆರ್ಡರ್ ಮಾಡಬೇಕು' ಎಂದನಾ ನಾರ್ತಿಂಡಿಯನ್.

ವಿಜಯ್ ಹೆಮ್ಮಿಗೆ, ಮೈಸೂರು

ದೊಡ್ಡ ಮೋರಿಗಳಿಗೆ ರಾಜಕಾಲುವೆ ಎನ್ನುತ್ತಾರೆ. ರಾಣಿಕಾಲುವೆ ಎಂದೇಕೆ ಹೇಳರು?

ರಾರಾಡಿಯಾದ; ಜಲವುಳ್ಳ ಮೋರಿ ರಾಜಕಾಲುವೆಯೇ.

## ಬಹುಮಾನಿತ ಪ್ರಶ್ನೆ

ಎಸ್. ಶಶಿಧರ್, ಬೆಂಗಳೂರು

ಹುಲಿಯನ್ನು ಕ್ಯಾಟ್ ಫ್ಯಾಮಿಲಿ ಎನ್ನುವರು. ಬೆಕ್ಕನ್ನು ಹುಲಿಯ ಕುಟುಂಬ ಎನ್ನರೇಕೆ?

ಶ್ರೇಷ್ಠರನ್ನು ಅಲ್ಪರಿಗೆ ಹೋಲಿಸುವುದರಲ್ಲೇ ಹೆಚ್ಚು ವಿಕೃತಾನಂದ ಸಿಗುವುದಂತೆ.

ಪಿ. ಜಯವಂತ ಪೈ, ಕುಂದಾಪುರ

ದಿಲ್ಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಮನೆಯಲ್ಲಿ ನೋಟುಗಳ ಕಂತೆ ಪತ್ತೆಯಂತೆ?

ಅದು ನ್ಯಾಯ ಬಹಳ ಬೆಲೆ ಬಾಳುವುದು ಎನ್ನುವುದಕ್ಕೆ ಸಾಕ್ಷಿಯಂತೆ.

ಎಲ್ಐಸಿ ವಿಜೇಂದ್ರ, ಮೈಸೂರು

ಹೆತ್ತವರಿಗೆ ಹೆಗ್ಗಣ ಮುದ್ದು ಎನ್ನುತ್ತಾರಲ್ಲ, ಯಾರಾದರೂ ಹೆಗ್ಗಣ ಹೆತ್ತಿದ್ದಾರಾ?

ವಿಧಾನಸೌಧ, ಪಾರ್ಲಿಮೆಂಟುಗಳನ್ನು ಕಂಡೂ ಹೀಗೆ ಕೇಳುವುದೇ, ಅಕಟಕಟಾ!

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಶತ್ರುಗಳನ್ನು ಕಡಿಮೆ ಮಾಡಿಕೊಳ್ಳಲು ಏನು ಮಾಡಬೇಕು?



ಜಾಲತಾಣದಲ್ಲಿ ವಿವಾದಾತ್ಮಕ ಪೋಸ್ಟ್ ಹಾಕುವುದನ್ನು ನಿಲ್ಲಿಸಬೇಕು.

ವಾಣಿ, ಮೈಸೂರು

ಅತಿಯಾದ ಪ್ರೀತಿ, ನಂಬಿಕೆಗೆ ಸಿಗುವ ಬೆಲೆ?

ಪ್ರೀತಿ, ನಂಬಿಕೆ ಷೇರ್ ಮಾರ್ಕೆಟಿನಂತೆ. ಆಗಾಗ್ಗೆ ಗಮನಿಸಿದರೆ ದೀಪಾವಳಿ, ಇರಿಸದಿದ್ದರೆ ದಿವಾಳಿ.

ಮೋಹನ್ ಎಸ್, ಮೈಸೂರು

ನಮಗಾಗದವರನ್ನು ಬೈಯ್ಯುತ್ತಿದ್ದರೆ ನೆಮ್ಮದಿ ಎನಿಸುವುದು ಏಕೆ?

ಏಕೆಂದರೆ ಅದು ಮನದ ಬ್ಲಾಕುಗಳಿಗೆ ಮಾಡುವ ಬೈಪಾಸ್ ಸರ್ಜರಿ!

ರಾಜೀವ್ ಎನ್. ಮಾಗಲ್, ಸಕಲೇಶಪುರ

ಹಿತ್ತಾಳೆ ಕಿವಿಯವರಿಗೆ 'ಕಿವಿ ಕಸಿ' ಮಾಡಿಸಿದರೆ ಹೇಗೆ?

ಆಗದು. ಮೂಲ ಲೋಹಕ್ಕೆ ಕಿಲುಬು ಹಿಡಿದೇ ಹಿಡಿಯುತ್ತದೆ.

■ ರಾಮ್